ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.1657/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ದುರುಗಪ್ಪ** | | |
| **ತಂದೆಃಹೆಸರು** | **ಹನುಮಂತಪ್ಪ** | **ಪಿಡಬ್ಲೂಃ** | **07** |
| **ವಯಸ್ಸು** | **45 ವರ್ಷ** | **ಸಿಡಬ್ಲೂಃ** | **17** |
| **ಉದ್ಯೋಗಃ** | **ಸಿ.ಪಿ.ಐ.** | | |
| **ವಾಸ ಸ್ಥಳಃ** | **ಕೊಟ್ಟೂರು ಪೋಲೀಸ್ ಠಾಣೆ.** | | |

**ದಿನಾಂಕ 23-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ನಾನು ದಿ.01-01-2023 ರಿಂದ ದಿ.08-02-2024 ರವರೆಗೆ ಸಿಂಧನೂರು ನಗರ ಠಾಣೆಯಲ್ಲಿ ಪೋಲೀಸ್ ಪಿ.ಐ. ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ07.01.2023 ರಂದು ಚಾಸಾ-1 ರವರಿಂದ ಮುಂದಿನ ತನಿಖೆಗಾಗಿ ಕಡತ ಪಡೆದು ಪರಿಶೀಲಿಸಿದೆನು. ಅದೇ ದಿನ ಮೃತ ಗೋಪಾಲಕೃಷ್ಣ ರವರ ಪಿ ಎಂ ವರದಿಯನ್ನು ಪಡೆದಿರುತ್ತೇನೆ. ಸಾಕ್ಷಿಯು ಪಿಎಂ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-23 ಎಂದು, ಸಾಕ್ಷಿಯ ಸಹಿಯನ್ನು ನಿಪಿ-23 ಎ ಎಂದು ಗುರುತಿಸಲಾಯಿತು.

ದಿ.16-01-2023 ರಂದು ಆರ್ ಟಿ ಓ ರಾಯಚೂರು ರವರಿಗೆ ಪಲ್ಸರ್ ಮೋ.ಬೈ. ಇಂಜಿನ್ ನಂಬರ್ ಕೆ ಎ 36/ಇ ಕ್ಯೂ 7686 ರ ಬಿ ಎಕ್ಸ್ಟ್ರಾಕ್ಟ್ ಕೊಡುವಂತೆ ಮನವಿ ಸಲ್ಲಿಸಿ, ಅದೇ ದಿನ ಸದರಿ ದಾಖಲೆಯನ್ನು ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿಯು ನಿವೇದನೆ & ಬಿ ಎಕ್ಸ್ಟ್ರಾಕ್ಟ್ ನ ಪ್ರತಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-24 & 25 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-24 ಎ & 25 ಎ ಎಂದು ಗುರುತಿಸಲಾಯಿತು.

ದಿ.17-02-2023 ರಂದು ಐಎಂವಿ ವರದಿ ಪಡೆದಿರುತ್ತೇನೆ. ಸದರಿ ವರದಿಯನ್ನು ನಿಪಿ-26 ಎಂದು, ಸಾಕ್ಷಿಯ ಸಹಿಯನ್ನು ನಿಪಿ-26 ಎ ಎಂದು ಗುರುತಿಸಲಾಯಿತು.

ದಿ.02-04-2023 ರಂದು ಪಲ್ಸರ್ ಬೈಕ್‌ನ್ನು ಅದರ ಮಾಲೀಕರಾದ ಚಾಸಾ-10 ರವರಿಗೆ ಕಲಂ.133 ಐಎಂವಿ ಅಡಿಯಲ್ಲಿ ನೋಟೀಸು ಕೊಟ್ಟು, ಉತ್ತರ ಪಡೆದಿರುತ್ತೇನೆ. ಸಾಕ್ಷಿಯು ನೋಟೀಸನ್ನು & ಉತ್ತರದ ಪ್ರತಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-27 & 28 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-27 ಎ & 28 ಎ ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿ ಭಾಗಿಯಾದ ವಾಹನ ಜಿಗಣಿ ಪೋ.ಠಾ. ಕ್ರೈಂ ನಂ.32/2020 ರಲ್ಲಿ ಕಳ್ಳತನವಾದ ವಾಹನ ಆಗಿತ್ತು. ಅದರ ಸಂ.ಕೆ ಎ 44/ಕ್ಯೂ 6337 ಆಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ನಕಲು ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ನಿವೇದನೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-29 ಎಂದು, ಸಾಕ್ಷಿಯ ಸಹಿಯನ್ನು ನಿಪಿ-29 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕೈ ಬರವಣಿಗೆಯ ಉತ್ತರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-30 ಎಂದು, ಸಾಕ್ಷಿಯ ಸಹಿಯನ್ನು ನಿಪಿ-30 ಎ ಎಂದು ಗುರುತಿಸಲಾಯಿತು.

ದಿ.05-04-2023 ರಂದು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತಿದ್ದರಿಂದ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ನೀವು ಕಡತವನ್ನು ಪಡೆದಿಲ್ಲ & ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ವರದಿಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ದಾಖಲೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ದಾಖಲೆಗಳನ್ನು ಕೊಡುವಂತೆ ನಿವೇದನೆ ಪತ್ರ ಬರೆದು ಉತ್ತರಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಸರಿಯಾದ ತನಿಖೆ ಮಾಡದೆ, ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**